ನೋಂದಾಯಿತ ಸಂಖ್ಯೆ. ಡಿಎಲ್–(ಎನ್)04/0007/2003–26

भारत का राजपत्र
The Gazette of India

ಸಿಜಿ–ಡಿಎಲ್–ಇ–31032026–271438

ಅಸಾಧಾರಣ

ಭಾಗ 2 – ವಿಭಾಗ 1

ಪ್ರಾಧಿಕಾರದಿಂದ ಪ್ರಕಟಿಸಲಾಗಿದೆ

ಸಂ.8] ನವ ದೆಹಲಿ, ಸೋಮವಾರ, 30ನೇ ಮಾರ್ಚ್, 2026/ಚೈತ್ರ 9, 1948 (ಸಕ)

ಈ ಭಾಗವನ್ನು ಪ್ರತ್ಯೇಕ ಸಂಕಲನವಾಗಿ ಸಲ್ಲಿಸುವ ಸಲುವಾಗಿ ಪ್ರತ್ಯೇಕ ಪುಟಗಳನ್ನಾಗಿ ನೀಡಲಾಗಿದೆ.

# ಕಾನೂನು ಮತ್ತು ನ್ಯಾಯ ಸಚಿವಾಲಯ

## (ಶಾಸಕಾಂಗ ಇಲಾಖೆ)

ನವ ದೆಹಲಿ, 30ನೇ ಮಾರ್ಚ್, 2026/ಚೈತ್ರ 9, 1948 (ಸಕ)

ಸಂಸತ್ತಿನ ಈ ಕೆಳಗಿನ ಅಧಿನಿಯಮವು 30ನೇ ಮಾರ್ಚ್, 2026 ರಂದು ರಾಷ್ಟ್ರಪತಿಯವರ ಅನುಮೋದನೆ ದೊರೆತಿದ್ದು, ಮತ್ತು ಸಾಮಾನ್ಯ ಮಾಹಿತಿಗಾಗಿ ಇದನ್ನು ಪ್ರಕಟಿಸಲಾಗಿದೆ :–

# ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಕಾಯ್ದೆ, 2026

(2026ರ ಸಂಖ್ಯೆ 3)

[ 30ನೇ ಮಾರ್ಚ್, 2026]

ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019 ಅನ್ನು ತಿದ್ದುಪಡಿ ಮಾಡಲು ಮಾಡಲಾದ ಒಂದು ಕಾಯ್ದೆ.

ಭಾರತ ಗಣರಾಜ್ಯದ ಎಪ್ಪತ್ತ–ಏಳನೇ ವರ್ಷದಲ್ಲಿ ಸಂಸತ್ತು ಜಾರಿಗೊಳಿಸಬೇಕಾಗಿರುವುದು ಈ ಕೆಳಗಿನಂತಿವೆ :–

1. (1) ಈ ಕಾಯ್ದೆಯನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಕಾಯ್ದೆ, 2026 ಎಂದು ಕರೆಯಲಾಗುತ್ತದೆ. ಸಂಕ್ಷಿಪ್ತ ಶೀರ್ಷಿಕೆ ಮತ್ತು ಜಾರಿಗೆ ಬರುವುದು.
(2) ಕೇಂದ್ರ ಸರ್ಕಾರ ಅಧಿಕೃತ ಗಜೆಟ್‌ನಲ್ಲಿ ಅಧಿಸೂಚನೆ ಮೂಲಕ ನೇಮಿಸುವ ದಿನಾಂಕದಿಂದ ಇದು ಜಾರಿಗೆ ಬರಲಿದೆ.

2. (2) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019ರ ಕಲಂ 2ರಲ್ಲಿ (ಇನ್ನು ಮುಂದೆ ಮೂಲ ಕಾಯ್ದೆ ಎಂದು ಕರೆಯಲ್ಪಡುವುದು)– ವಿಭಾಗ 2ರ ತಿದ್ದುಪಡಿ.

*(i)* ಕ್ಲಾಸ್ (a) ಬದಲು ಕೆಳಗಿನ ಕ್ಲಾಸನ್ನು ಸೇರಿಸಬೇಕು, ಅವುಗಳೆಂದರೆ :–

(a) "ಸಮುಚಿತ ಸರ್ಕಾರ"ವೆಂದರೆ–

(i) ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಬಹುಪಾಲು ಹಣಕಾಸು ನೆರವು ಪಡೆಯುವ ಯಾವುದೇ ಸಂಸ್ಥೆಗೆ ಸಂಬಂಧಿಸಿದ ಸರ್ಕಾರ, ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಬಹುಪಾಲು ಹಣಕಾಸು ನೆರವು ಪಡೆಯುವ ಯಾವುದೇ ಸಂಸ್ಥೆಗೆ, ಅಥವಾ ರಾಜ್ಯದೊಳಗಿನ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಸರ್ಕಾರ, ರಾಜ್ಯ ಸರ್ಕಾರ;

(iii) ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಅಥವಾ ಆ ಪ್ರದೇಶದಲ್ಲಿ ಕೇಂದ್ರ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಬಹುಪಾಲು ಹಣಕಾಸು ನೆರವು ಪಡೆಯುವ ಯಾವುದೇ ಸಂಸ್ಥೆಗೆ ಸಂಬಂಧಿಸಿದಂತೆ, ಸಂವಿಧಾನದ ಕಲಂ 239ರಡಿ ನೇಮಿಸಲಾದ ಆಡಳಿತಾಧಿಕಾರಿ ಅಥವಾ ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸುವ ಇತರೆ ಪ್ರಾಧಿಕಾರ;

(ii) ಕ್ಲಾಸ್ (a) ನಂತರ ಕೆಳಗಿನ ಕ್ಲಾಸನ್ನು ಸೇರಿಸಬೇಕು, ಅವುಗಳೆಂದರೆ:–

`(aa) "ಪ್ರಾಧಿಕಾರ"ವೆಂದರೆ ಮುಖ್ಯ ವೈದ್ಯಾಧಿಕಾರಿ ಅಥವಾ ಉಪ ಮುಖ್ಯ ವೈದ್ಯಾಧಿಕಾರಿಯ ನೇತೃತ್ವದ ವೈದ್ಯಕೀಯ ಮಂಡಳಿ, ಇದನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತದಿಂದ ನೇಮಿಸಬಹುದು;

(iii) ಕ್ಲಾಸ್ (*i*) ಯನ್ನು ತೆಗೆದುಹಾಕಲಾಗಿದೆ;

(iv) ಕ್ಲಾಸ್ (*k*) ಬದಲು ಈ ಕೆಳಗಿನ ಕ್ಲಾಸನ್ನು ಸೇರಿಸಬೇಕು, ಅವುಗಳೆಂದರೆ:–

`(k) "ಟ್ರಾನ್ಸ್‌ಜೆಂಡರ್ ವ್ಯಕ್ತಿ"ಯೆಂದರೆ?

(*i*) ಕಿನ್ನರ್, ಹಿಜ್ರಾ, ಅರವಾಣಿ ಮತ್ತು ಜೋಗ್ತಾ ಇತ್ಯಾದಿ ಸಾಮಾಜಿಕ–ಸಾಂಸ್ಕೃತಿಕ ಗುರುತನ್ನು ಹೊಂದಿರುವ ವ್ಯಕ್ತಿ, ಅಥವಾ ಯುನಕ್ (eunuch), ಅಥವಾ ಕೆಳಗೆ ನಿರ್ದಿಷ್ಟಪಡಿಸಿದಂತೆ ಇಂಟರ್‌ಸೆಕ್ಸ್ (ಅಂತರ್ಲಿಂಗೀ) ವ್ಯತ್ಯಾಸಗಳನ್ನು ಹೊಂದಿರುವ ವ್ಯಕ್ತಿ, ಅಥವಾ ಜನನದ ಸಮಯದಲ್ಲಿ ಪುರುಷ ಅಥವಾ ಮಹಿಳೆಯ ಅಭಿವೃದ್ಧಿಯೊಂದಿಗೆ ಹೋಲಿಸಿದರೆ ಕೆಳಗಿನ ಲಿಂಗ ಲಕ್ಷಣಗಳಲ್ಲಿ ಒಂದರಲ್ಲಿ ಅಥವಾ ಹೆಚ್ಚಿನದಲ್ಲಿರುವ ಜನ್ಮಜಾತ ವ್ಯತ್ಯಾಸವನ್ನು ಹೊಂದಿರುವ ವ್ಯಕ್ತಿ:–

(*a*) ಪ್ರಾಥಮಿಕ ಲೈಂಗಿಕ ಲಕ್ಷಣಗಳು;

(*b*) ಬಾಹ್ಯ ಜನನಾಂಗಗಳು;

(*c*) ಕ್ರೋಮೋಸೋಮಲ್ ಮಾದರಿಗಳು;

(*d*) ಗೊನಾಡಲ್ (gonadal) ಅಭಿವೃದ್ಧಿ;

(*e*) ದೇಹದೊಳಗಿನ ಹಾರ್ಮೋನ್ ಉತ್ಪಾದನೆ ಅಥವಾ ಪ್ರತಿಕ್ರಿಯೆ, ಅಥವಾ ಇತರೆ ವೈದ್ಯಕೀಯ ಸ್ಥಿತಿಗಳು; ಅಥವಾ

(ii) ಬಲಾತ್ಕಾರ, ಆಮಿಷ, ಪ್ರಲೋಭನೆ, ವಂಚನೆ ಅಥವಾ ಅನಾವಶ್ಯಕ ಪ್ರಭಾವದ ಮೂಲಕ, ಅನುಮತಿ ಇದ್ದರೂ ಇಲ್ಲದಿದ್ದರೂ, ಅಂಗವಿಚ್ಛೇದನ, ಪುರುಷತ್ವ ನಿಷ್ಕ್ರಿಯಗೊಳಿಸುವಿಕೆ (emasculation), ವೃಷಣ ತೆಗೆಯುವಿಕೆ (castration), ಅಂಗ ಕತ್ತರಿಕೆ (amputation), ಅಥವಾ ಯಾವುದೇ ಶಸ್ತ್ರಚಿಕಿತ್ಸಾ, ರಾಸಾಯನಿಕ ಅಥವಾ ಹಾರ್ಮೋನಲ್ ವಿಧಾನಗಳ ಮೂಲಕ ಅಥವಾ ಇತರೆ ರೀತಿಯಲ್ಲಿ, ಟ್ರಾನ್ಸ್‌ಜೆಂಡರ್ ಗುರುತನ್ನು ಸ್ವೀಕರಿಸಲು, ಅಂಗೀಕರಿಸಲು ಅಥವಾ ಬಾಹ್ಯವಾಗಿ ಪ್ರದರ್ಶಿಸಲು ಬಲವಂತಪಡಿಸಲ್ಪಟ್ಟ ಯಾವುದೇ ವ್ಯಕ್ತಿ ಅಥವಾ ಮಗು:

ಆದರೆ, ಇದರಲ್ಲಿ ವಿಭಿನ್ನ ಲೈಂಗಿಕ ಅಭಿರುಚಿಗಳನ್ನು (sexual orientations) ಹೊಂದಿರುವ ಮತ್ತು ಸ್ವಯಂ–ಗ್ರಹಿಸಿದ ಲೈಂಗಿಕ ಗುರುತನ್ನು (self-perceived sexual identities) ಹೊಂದಿರುವ ವ್ಯಕ್ತಿಗಳು ಸೇರಿರುವುದಿಲ್ಲ ಹಾಗೂ ಎಂದಿಗೂ ಸೇರಿಸಲಾಗುವುದಿಲ್ಲ.

ವಿಭಾಗ 4ರ ತಿದ್ದುಪಡಿ. 3. ಮೂಲ ಕಾಯ್ದೆಯ ಕಲಂ 4ರಲ್ಲಿ, ಉಪ–ವಿಭಾಗ (2) ನ್ನು ತೆಗೆದುಹಾಕಲಾಗಿದೆ.

ವಿಭಾಗ 6ರ ತಿದ್ದುಪಡಿ. 4. ಮೂಲ ಕಾಯ್ದೆಯ ಕಲಂ 6ರಲ್ಲಿ,–

(*a*) ಉಪ–ವಿಭಾಗ (1)ರಲ್ಲಿ "ಜಿಲ್ಲಾ ನ್ಯಾಯಾಧೀಶರು (ಜಿಲ್ಲಾ ಮ್ಯಾಜಿಸ್ಟ್ರೇಟ್)" ಎಂಬ ಪದಗಳ ಬದಲು, " ಜಿಲ್ಲಾ ನ್ಯಾಯಾಧೀಶರು, ಪ್ರಾಧಿಕಾರದ ಶಿಫಾರಸ್ಸನ್ನು ಪರಿಶೀಲಿಸಿದ ನಂತರ ಮತ್ತು ಅಗತ್ಯವಿದ್ದಲ್ಲಿ ಅಥವಾ ಅಪೇಕ್ಷಣೀಯವೆಂದು ಪರಿಗಣಿಸಿದಲ್ಲಿ, ಇತರೆ ವೈದ್ಯಕೀಯ ತಜ್ಞರ ಸಹಾಯವನ್ನು ಪಡೆದ ನಂತರ" ಎಂಬ ಪದಗಳೊಂದಿಗೆ ಬದಲಿಸಬೇಕು.

(*b*) ಉಪ–ವಿಭಾಗ (3) ನಂತರ ಕೆಳಗಿನ ಉಪ–ವಿಭಾಗವನ್ನು ಸೇರಿಸಬೇಕು, ಅವೇನೆಂದರೆ:–

"(4) ಉಪ–ವಿಭಾಗ (*1*) ಅಡಿಯಲ್ಲಿ ಗುರುತಿನ ಪ್ರಮಾಣಪತ್ರವನ್ನು ಪಡೆದ ಮತ್ತು ಈ ಕಾಯ್ದೆಯ ವ್ಯಾಖ್ಯಾನದ ಅಡಿಯಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿ ಎಂದು ಘೋಷಿಸಲ್ಪಟ್ಟ ವ್ಯಕ್ತಿಯು, ಅವರ ಜನನ ಪ್ರಮಾಣಪತ್ರ ಮತ್ತು ಆ ವ್ಯಕ್ತಿಯ ಗುರುತಿಗೆ ಸಂಬಂಧಿಸಿದ ಇತರೆ ಎಲ್ಲಾ ಅಧಿಕೃತ ದಾಖಲೆಗಳಲ್ಲಿ ಮೊದಲ ಹೆಸರನ್ನು (first name) ಬದಲಾಯಿಸಲು ಅರ್ಹರಾಗಿರುತ್ತಾರೆ.".

5. ಮೂಲ ಕಾಯ್ದೆಯ ವಿಭಾಗ 7ರಲ್ಲಿ,? ವಿಭಾಗ 7ರ ತಿದ್ದುಪಡಿ.

(*a*) ಉಪ–ವಿಭಾಗ (1)ರಲ್ಲಿ, "ಅಂತಹ ವ್ಯಕ್ತಿಯು ಮಾಡಬಹುದು (such person may)" ಎಂಬ ಪದಗಳ ಬದಲಾಗಿ "ಅಂತಹ ವ್ಯಕ್ತಿ ಮಾಡಬೇಕು (such person shall)" ಎಂಬ ಪದಗಳನ್ನು ಸೇರಿಸಬೇಕು;

(*b*) ಉಪ–ವಿಭಾಗ (1)ರ ನಂತರ, ಕೆಳಗಿನ ಉಪ–ವಿಭಾಗವನ್ನು ಸೇರಿಸಬೇಕು, ಅವೇನೆಂದರೆ:–

"(*1A*) ಪುರುಷ ಅಥವಾ ಮಹಿಳೆಯಾಗಿ ಲಿಂಗತ್ವವನ್ನು ಬದಲಾಯಿಸಲು ಶಸ್ತ್ರಚಿಕಿತ್ಸೆಗೆ ಒಳಗಾದ ವ್ಯಕ್ತಿಯು ವೈದ್ಯಕೀಯ ಸಂಸ್ಥೆಯು, ನಿಯಮಿತವಾಗಿ ಸೂಚಿಸಬಹುದಾದ ನಮೂನೆ ಮತ್ತು ವಿಧಾನದಲ್ಲಿ, ಆ ವ್ಯಕ್ತಿಯ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ಪ್ರಾಧಿಕಾರಕ್ಕೆ ಸಲ್ಲಿಸಬೇಕು.";

(*c*) ಉಪ–ವಿಭಾಗ (2)ಕ್ಕೆ, ಕೆಳಗಿನ ಉಪ–ವಿಭಾಗವನ್ನು ಸೇರಿಸಬೇಕು, ಅವೇನೆಂದರೆ:–

"(2) ಉಪ–ವಿಭಾಗ (1)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ಜಿಲ್ಲಾ ನ್ಯಾಯಾಧೀಶರಿಗೆ ಅರ್ಜಿಯನ್ನು ಸಲ್ಲಿಸಬೇಕು. ವೈದ್ಯಕೀಯ ಅಧೀಕ್ಷಕರು ಅಥವಾ ಮುಖ್ಯ ವೈದ್ಯಾಧಿಕಾರಿಗಳು ನೀಡಿದ ಪ್ರಮಾಣಪತ್ರದೊಂದಿಗೆ ಸಲ್ಲಿಸಲಾದ ಅರ್ಜಿಯನ್ನು ಸ್ವೀಕರಿಸಿದ ನಂತರ ಮತ್ತು ಆ ಪ್ರಮಾಣಪತ್ರದ ನೈಜ್ಯತೆಯಿಂದ ತೃಪ್ತಿಗೊಂಡ ನಂತರ, ಜಿಲ್ಲಾ ನ್ಯಾಯಾಧೀಶರು ನಿಯಮಿತವಾಗಿ ಸೂಚಿಸಬಹುದಾದ ನಮೂನೆ, ವಿಧಾನ ಮತ್ತು ಅವಧಿಯ ಒಳಗೆ ಲಿಂಗತ್ವ ಬದಲಾವಣೆಯನ್ನು ಸೂಚಿಸುವ ಪ್ರಮಾಣಪತ್ರವನ್ನು ನೀಡಬೇಕು.";

(*d*) ಉಪ–ವಿಭಾಗ (3) ಹಾಗೂ ಅದರ ನಿಯಮಾವಳಿಯನ್ನು ತೆಗೆದುಹಾಕಲಾಗಿದೆ.

6. ಮೂಲ ಕಾಯ್ದೆಯ ಕಲಂ 16ರಲ್ಲಿ, ಉಪ–ವಿಭಾಗ (2)ರಲ್ಲಿ, ಕ್ಲಾಸ್ (*f*) ಬದಲು ಕೆಳಗಿನ ಕ್ಲಾಸನ್ನು ಸೇರಿಸಬೇಕು, ಅವೇನೆಂದರೆ:– ವಿಭಾಗ 16ರ ತಿದ್ದುಪಡಿ.

"(*f*) ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತದ ಪ್ರತಿನಿಧಿಗಳು, ಸರದಿಯ ಪ್ರಕಾರ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಈಶಾನ್ಯ ಪ್ರದೇಶಗಳಿಂದ ತಲಾ ಒಬ್ಬರಂತೆ, ಸಂಬಂಧಪಟ್ಟ ಸಚಿವಾಲಯ ಅಥವಾ ಇಲಾಖೆಯಲ್ಲಿ ನಿರ್ದೇಶಕ ಶ್ರೇಣಿಗಿಂತ ಕಡಿಮೆಯಿಲ್ಲದ ಹುದ್ದೆಯವರಾಗಿದ್ದು, ಕೇಂದ್ರ ಸರ್ಕಾರದಿಂದ ಪದನಿಮಿತ್ತ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕು;".

7. ಮೂಲ ಕಾಯ್ದೆಯ ಕಲಂ 18 ಬದಲು ಕೆಳಗಿನ ಕಲಂ ಅನ್ನು ಸೇರಿಸಬೇಕು, ಅವೇನೆಂದರೆ:– ಕಲಂ 18ರ ಬದಲು ಹೊಸ ಕಲಂ ಸೇರ್ಪಡೆ

"18. ಯಾರಾದರೂ,– ಅಪರಾಧಗಳು ಮತ್ತು ಶಿಕ್ಷೆಗಳು

(*a*) ಸರ್ಕಾರವು ಸಾರ್ವಜನಿಕ ಉದ್ದೇಶಗಳಿಗಾಗಿ ವಿಧಿಸಿರುವ ಕಡ್ಡಾಯ ಸೇವೆಯನ್ನು ಹೊರತುಪಡಿಸಿ, ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಬಲವಂತ ಅಥವಾ ಜೀತದ ಕೆಲಸದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಬಲವಂತಪಡಿಸುತ್ತಾರೋ ಅಥವಾ ಪ್ರಲೋಭನೆ ನೀಡುತ್ತಾರೋ, ಅವರಿಗೆ ಕನಿಷ್ಠ ಆರು ತಿಂಗಳಿನಿಂದ ಎರಡು ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು;

(*b*) ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ಸಾರ್ವಜನಿಕ ಸ್ಥಳಕ್ಕೆ ಹೋಗುವ ಹಕ್ಕನ್ನು ನಿರಾಕರಿಸುತ್ತಾರೋ ಅಥವಾ ಇತರರಿಗೆ ಲಭ್ಯವಿರುವ ಅಥವಾ ಬಳಸುವ ಹಕ್ಕಿರುವ ಸಾರ್ವಜನಿಕ ಸ್ಥಳವನ್ನು ಬಳಸಲು ಅಥವಾ ಪ್ರವೇಶಿಸಲು ಅಡ್ಡಿಪಡಿಸುತ್ತಾರೋ, ಅವರಿಗೆ ಕನಿಷ್ಠ ಆರು ತಿಂಗಳಿನಿಂದ ಎರಡು ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು;

(*c*) ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಮನೆ, ಗ್ರಾಮ ಅಥವಾ ಇತರೆ ವಾಸಸ್ಥಳವನ್ನು ತೊರೆಯಲು ಬಲವಂತಪಡಿಸುತ್ತಾರೋ ಅಥವಾ ಕಾರಣವಾಗುತ್ತಾರೋ, ಅವರಿಗೆ ಕನಿಷ್ಠ ಆರು ತಿಂಗಳಿನಿಂದ ಎರಡು ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು;"

(*d*) ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಮಾನಸಿಕ ಅಥವಾ ದೈಹಿಕ ಜೀವನ, ಸುರಕ್ಷತೆ, ಆರೋಗ್ಯ ಅಥವಾ ಯೋಗಕ್ಷೇಮಕ್ಕೆ ಹಾನಿ ಅಥವಾ ಅಪಾಯವನ್ನು ಉಂಟುಮಾಡುವುದು, ಅಥವಾ ದೈಹಿಕ ಕಿರುಕುಳ, ಲೈಂಗಿಕ ಕಿರುಕುಳ, ಮೌಖಿಕ ಮತ್ತು ಭಾವನಾತ್ಮಕ ಕಿರುಕುಳ ಹಾಗೂ ಆರ್ಥಿಕ ಕಿರುಕುಳಗಳನ್ನು ಒಳಗೊಂಡ ಕೃತ್ಯಗಳನ್ನು ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು, ಇವುಗಳಿಗೆ ಕನಿಷ್ಠ ಆರು ತಿಂಗಳಿನಿಂದ ಎರಡು ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು;

(*e*) ಯಾವುದೇ ವಯಸ್ಕ ವ್ಯಕ್ತಿಯನ್ನು ಅಪಹರಿಸಿ ಅಥವಾ ಅಪಹರಣ ಮಾಡಿದ್ದಲ್ಲಿ–

(*i*) ಅಂಗವಿಕಲಗೊಳಿಸುವಿಕೆ, ಲೈಂಗಿಕ ಅಂಗಕ್ಕೆ ಹಾನಿ (emasculation), ವೃಷಣ ತೆಗೆಯುವಿಕೆ (castration), ಅಂಗಚ್ಛೇದನ ಅಥವಾ ಯಾವುದೇ ಶಸ್ತ್ರಚಿಕಿತ್ಸಾ, ರಾಸಾಯನಿಕ ಅಥವಾ ಹಾರ್ಮೋನಲ್ ವಿಧಾನಗಳ ಮೂಲಕ ಗಂಭೀರ ಗಾಯ ಉಂಟುಮಾಡುವುದು; ಅಥವಾ

(*ii*) ಆ ವ್ಯಕ್ತಿಯ ದೇಹಕ್ಕೆ ಅಥವಾ ದೈಹಿಕ ಕಾರ್ಯಗಳಿಗೆ ಶಾಶ್ವತ ಅಥವಾ ಗಂಭೀರ ಹಾನಿ ಉಂಟುಮಾಡುವುದು,

ಹಾಗೆಯೇ ಆ ವ್ಯಕ್ತಿಯ ಇಚ್ಛೆಗೆ ಅಥವಾ ಒಪ್ಪಿಗೆಗೆ ವಿರುದ್ಧವಾಗಿ, ಬಲವಂತ, ಪ್ರಲೋಭನೆ, ವಂಚನೆ, ಅನಾವಶ್ಯಕ ಪ್ರಭಾವ ಅಥವಾ ಇತರೆ ವಿಧಾನಗಳ ಮೂಲಕ ಟ್ರಾನ್ಸ್‌ಜೆಂಡರ್ ಗುರುತನ್ನು ಸ್ವೀಕರಿಸಲು, ಅಳವಡಿಸಿಕೊಳ್ಳಲು ಅಥವಾ ಬಾಹ್ಯವಾಗಿ ಪ್ರದರ್ಶಿಸಲು ಒತ್ತಾಯಿಸುವ ಉದ್ದೇಶದಿಂದ ಅಥವಾ ಅದರ ಸಂದರ್ಭದಲ್ಲಿ ಈ ಕೃತ್ಯಗಳನ್ನು ಮಾಡಿದ್ದಲ್ಲಿ, ಅವರಿಗೆ ಕನಿಷ್ಠ ಹತ್ತು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಯಿಂದ ಜೀವಾವಧಿಯವರೆಗೆ ಕಾರಾಗೃಹ ಶಿಕ್ಷೆ ಮತ್ತು ಕನಿಷ್ಠ ಎರಡು ಲಕ್ಷ ರೂಪಾಯಿ ದಂಡವನ್ನು ವಿಧಿಸಲಾಗುವುದು;

(*f*) ಯಾವುದೇ ಮಗುವನ್ನು ಅಪಹರಿಸಿ ಅಥವಾ ಅಪಹರಣ ಮಾಡಿದ್ದಲ್ಲಿ–

(*i*) ಅಂಗವಿಕಲಗೊಳಿಸುವಿಕೆ, ಲೈಂಗಿಕ ಅಂಗ ಹಾನಿ (emasculation), ವೃಷಣ ತೆಗೆಯುವಿಕೆ (castration), ಅಂಗಚ್ಛೇದನ ಅಥವಾ ಯಾವುದೇ ಶಸ್ತ್ರಚಿಕಿತ್ಸಾ, ರಾಸಾಯನಿಕ ಅಥವಾ ಹಾರ್ಮೋನಲ್ ವಿಧಾನಗಳ ಮೂಲಕ ಗಂಭೀರ ಗಾಯ ಉಂಟುಮಾಡುವುದು; ಅಥವಾ

(*ii*) ಆ ಮಗುವಿನ ದೇಹಕ್ಕೆ ಅಥವಾ ದೈಹಿಕ ಕಾರ್ಯಗಳಿಗೆ ಶಾಶ್ವತ ಅಥವಾ ಗಂಭೀರ ಹಾನಿ ಉಂಟುಮಾಡುವುದು,

ಹಾಗೆಯೇ ಆ ಮಗುವಿನ ಮೇಲೆ ಬಲವಂತ, ಪ್ರಲೋಭನೆ, ವಂಚನೆ, ಅನಾವಶ್ಯಕ ಪ್ರಭಾವ ಅಥವಾ ಇತರೆ ವಿಧಾನಗಳ ಮೂಲಕ ಟ್ರಾನ್ಸ್‌ಜೆಂಡರ್ ಗುರುತನ್ನು ಸ್ವೀಕರಿಸಲು, ಅಳವಡಿಸಿಕೊಳ್ಳಲು ಅಥವಾ ಬಾಹ್ಯವಾಗಿ ಪ್ರದರ್ಶಿಸಲು ಒತ್ತಾಯಿಸುವ ಉದ್ದೇಶದಿಂದ ಅಥವಾ ಅದರ ಸಂದರ್ಭದಲ್ಲಿ ಈ ಕೃತ್ಯಗಳನ್ನು ಮಾಡಿದ್ದಲ್ಲಿ, ಅವರಿಗೆ ಜೀವಾವಧಿಯವರೆಗೆ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು ಮತ್ತು ಕನಿಷ್ಠ ಐದು ಲಕ್ಷ ರೂಪಾಯಿ ದಂಡವನ್ನು ವಿಧಿಸಲಾಗುವುದು;

(*g*) ಬಲವಂತ, ಬೆದರಿಕೆ, ಬಲಾತ್ಕಾರ, ಪ್ರಲೋಭನೆ, ವಂಚನೆ, ಪ್ರಚೋದನೆ ಅಥವಾ ಅನಾವಶ್ಯಕ ಪ್ರಭಾವದ ಮೂಲಕ–

(*i*) ಯಾವುದೇ ವ್ಯಕ್ತಿಯನ್ನು, ಆ ವ್ಯಕ್ತಿಯು ಟ್ರಾನ್ಸ್‌ಜೆಂಡರ್ ವ್ಯಕ್ತಿಯಾಗಿರಲಿ ಅಥವಾ ಇಲ್ಲದಿರಲಿ, ಅವರ ಇಚ್ಛೆಗೆ ವಿರುದ್ಧವಾಗಿ ಟ್ರಾನ್ಸ್‌ಜೆಂಡರ್ ವ್ಯಕ್ತಿಯಂತೆ ಉಡುಗೆ ಧರಿಸಲು, ಪ್ರದರ್ಶಿಸಲು ಅಥವಾ ವರ್ತಿಸಲು ಒತ್ತಾಯಿಸುವುದು; ಮತ್ತು

(*ii*) ಹಾಗೆ ಪ್ರದರ್ಶಿಸುವ ಸಂದರ್ಭದಲ್ಲಿ ಆ ವ್ಯಕ್ತಿಯನ್ನು ಭಿಕ್ಷಾಟನೆ, ಸೆಳೆಯಲು/ಕೋರಲು (solicitation), ಗುಲಾಮಗಿರಿ (servitude) ಅಥವಾ ಇತರೆ ಯಾವುದೇ ಬಲವಂತದ ಅಥವಾ ಜೀತದ ದುಡಿಮೆಯಲ್ಲಿ ತೊಡಗಿಸಿಕೊಳ್ಳಲು, ಬಳಸಿದಲ್ಲಿ ಅಥವಾ ಉಂಟುಮಾಡಿದ್ದಲ್ಲಿ,

ಅಂತಹ ವ್ಯಕ್ತಿಗಳಿಗೆ ಕನಿಷ್ಠ ಐದು ವರ್ಷಗಳಿಂದ ಹತ್ತು ವರ್ಷಗಳವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಕನಿಷ್ಠ ಒಂದು ಲಕ್ಷ ರೂಪಾಯಿ ದಂಡವನ್ನು ವಿಧಿಸಲಾಗುವುದು; ಮತ್ತು

(*h*) ಬಲವಂತ, ಬೆದರಿಕೆ, ಬಲಾತ್ಕಾರ, ಪ್ರಲೋಭನೆ, ವಂಚನೆ, ಪ್ರಚೋದನೆ, ಅನಾವಶ್ಯಕ ಪ್ರಭಾವ ಅಥವಾ ಇತರೆ ವಿಧಾನಗಳ ಮೂಲಕ–

(*i*) ಯಾವುದೇ ಮಗುವನ್ನು, ಆ ಮಗು ಟ್ರಾನ್ಸ್‌ಜೆಂಡರ್ ವ್ಯಕ್ತಿಯಾಗಿರಲಿ ಅಥವಾ ಇಲ್ಲದಿರಲಿ, ಟ್ರಾನ್ಸ್‌ಜೆಂಡರ್ ವ್ಯಕ್ತಿಯಂತೆ ಉಡುಗೆ ಧರಿಸಲು, ಪ್ರದರ್ಶಿಸಲು ಅಥವಾ ವರ್ತಿಸಲು ಒತ್ತಾಯಿಸುವುದು; ಮತ್ತು

(*ii*) ಹಾಗೆ ಪ್ರದರ್ಶಿಸುವ ಸಂದರ್ಭದಲ್ಲಿ ಆ ಮಗುವನ್ನು ಭಿಕ್ಷಾಟನೆ, ಸೆಳೆಯಲು/ಕೋರಲು (solicitation), ಗುಲಾಮಗಿರಿ (servitude) ಅಥವಾ ಇತರೆ ಯಾವುದೇ ಬಲವಂತದ ಅಥವಾ ಜೀತದ ದುಡಿಮೆಯಲ್ಲಿ ತೊಡಗಿಸಿಕೊಳ್ಳಲು, ಬಳಸಿದಲ್ಲಿ ಅಥವಾ ಉಂಟುಮಾಡಿದ್ದಲ್ಲಿ,

ಅಂತಹ ವ್ಯಕ್ತಿಗಳಿಗೆ ಕನಿಷ್ಠ ಹತ್ತು ವರ್ಷಗಳಿಂದ ಹದಿನಾಲ್ಕು ವರ್ಷಗಳವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಕನಿಷ್ಠ ಮೂರು ಲಕ್ಷ ರೂಪಾಯಿ ದಂಡವನ್ನು ವಿಧಿಸಲಾಗುವುದು;

ವಿಭಾಗ 22ರ ತಿದ್ದುಪಡಿ.

8. ಮೂಲ ಕಾಯ್ದೆಯ ಕಲಂ 22ರಲ್ಲಿ, ಉಪ–ವಿಭಾಗ (2)ರಲ್ಲಿ,–

(*a*) ಕ್ಲಾಸ್ (*c*)ನಲ್ಲಿ "ಉಪ–ವಿಭಾಗ (*1*) " ಎಂಬ ಪದ, ಆವರಣ ಚಿಹ್ನೆ ಮತ್ತು ಸಂಖ್ಯೆಯ ನಂತರ, ಮತ್ತು "ಉಪ–ವಿಭಾಗ (1A) ಅಡಿಯಲ್ಲಿ ವೈದ್ಯಕೀಯ ಸಂಸ್ಥೆಗಳು ಒದಗಿಸಬೇಕಾದ ವಿವರಗಳ ನಮೂನೆ ಮತ್ತು ವಿಧಾನ" ಎಂಬ ಪದಗಳು, ಆವರಣ ಚಿಹ್ನೆ, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸಬೇಕು;

(*b*) ಕ್ಲಾಸ್ (*d*)ನಲ್ಲಿ " ಪರಿಷ್ಕೃತ (revised)" ಎಂಬ ಪದವನ್ನು ತೆಗೆದುಹಾಕಲಾಗಿದೆ.

---

ಡಾ. ರಾಜೀವ ಮಣಿ,
ಭಾರತ ಸರ್ಕಾರದ ಕಾರ್ಯದರ್ಶಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1. ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಒಂದು ನಿರ್ದಿಷ್ಟ ವರ್ಗವನ್ನು ಗುರುತಿಸಿ, ಅವರು ಎದುರಿಸುವ ಸಾಮಾಜಿಕ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಅವರ ರಕ್ಷಣೆಗೆ ಒಂದು ವ್ಯವಸ್ಥೆಯನ್ನು ನಿರ್ಮಿಸುವುದು ಶಾಸನಾತ್ಮಕ ನೀತಿಯಾಗಿದೆ. ಈ ಶಾಸನಾತ್ಮಕ ನೀತಿ, ಯಾವುದೇ ತಪ್ಪಿಲ್ಲದೆ ಮತ್ತು ತಮ್ಮ ಆಯ್ಕೆಯಿಲ್ಲದೆ ಜೀವಶಾಸ್ತ್ರೀಯ ಕಾರಣಗಳಿಂದ ಗಂಭೀರ ಸಾಮಾಜಿಕ ಬಹಿಷ್ಕಾರವನ್ನು ಎದುರಿಸುವವರನ್ನು ಮಾತ್ರ ರಕ್ಷಿಸುವ ಉದ್ದೇಶ ಹೊಂದಿತ್ತು ಮತ್ತು ಹೊಂದಿದೆ.

2. ಈ ಕಾಯ್ದೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಕಾಲಕ್ರಮೇಣ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವ್ಯಾಖ್ಯಾನದ ವ್ಯಾಪ್ತಿ ಹಾಗೂ ಪ್ರಸ್ತುತ ವ್ಯಾಖ್ಯಾನದಡಿ ಅಂತಹ ವ್ಯಕ್ತಿಗಳನ್ನು ಹೇಗೆ ಗುರುತಿಸಬೇಕು ಎಂಬ ವಿಷಯದಲ್ಲಿ ಕೆಲವು ಅನುಮಾನಗಳು ಮತ್ತು ಅಡಚಣೆಗಳು ಉದ್ಭವಿಸಿವೆ ಮತ್ತು ಮುಂದುವರೆಯುವ ಸಾಧ್ಯತೆಯಿದೆ. ಈ ವಿಷಯವು ಕಾಯ್ದೆಯ ಜಾರಿಗೆ ಅತ್ಯಂತ ಮಹತ್ವದ್ದಾಗಿದೆ, ಏಕೆಂದರೆ ಈ ಕಾಯ್ದೆಯು ನಿಜವಾಗಿಯೂ ರಕ್ಷಣೆಯ ಅಗತ್ಯವಿರುವವರಿಗೆ ಮಾತ್ರ ಪ್ರಯೋಜನಕಾರಿಯಾಗಬೇಕು.

3. ಈ ಕಾಯ್ದೆಯ ಉದ್ದೇಶ, ಆಶಯ ಮತ್ತು ಗುರಿ ಏನೆಂದರೆ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಟ್ರಾನ್ಸ್‌ಜೆಂಡರ್ ಎಂದು ಗುರುತಿಸಲ್ಪಡುವ ಮತ್ತು ತೀವ್ರ ಹಾಗೂ ದಮನಾತ್ಮಕ ರೀತಿಯ ಸಮಾಜದ ಭೇದಭಾವವನ್ನು ಎದುರಿಸುವ ನಿರ್ದಿಷ್ಟ ವರ್ಗದ ವ್ಯಕ್ತಿಗಳನ್ನು ರಕ್ಷಿಸುವುದಾಗಿದೆ. ಈ ಕಾಯ್ದೆಯ ಉದ್ದೇಶವು ವಿವಿಧ ಲಿಂಗತ್ವ ಗುರುತುಗಳು, ಸ್ವಯಂ–ಗ್ರಹಿಸಿದ ಲೈಂಗಿಕ/ಲಿಂಗತ್ವ ಗುರುತುಗಳು ಅಥವಾ ಲಿಂಗತ್ವ ಸ್ಥಿರತೆಯನ್ನು ಹೊಂದಿರದ ಪ್ರತಿಯೊಬ್ಬರನ್ನೂ ರಕ್ಷಿಸುವುದಲ್ಲ.

4. "ಟ್ರಾನ್ಸ್‌ಜೆಂಡರ್ ವ್ಯಕ್ತಿ" ಎಂಬ ಪದದ ಪ್ರಸ್ತುತ ಅಸ್ಪಷ್ಟ ವ್ಯಾಖ್ಯಾನವು, ಈ ಕಾಯ್ದೆಯ ಪ್ರಯೋಜನಗಳು ತಲುಪಬೇಕಾದ ನಿಜವಾದ ಪೀಡಿತ ವ್ಯಕ್ತಿಗಳನ್ನು ಗುರುತಿಸುವುದನ್ನು ಅಸಾಧ್ಯಗೊಳಿಸುವುದಷ್ಟೇ ಅಲ್ಲ, ದಂಡಾತ್ಮಕ, ನಾಗರಿಕ ಮತ್ತು ವೈಯಕ್ತಿಕ ಕಾನೂನುಗಳಡಿ ಇರುವ ಅನೇಕ ನಿಯಮಗಳನ್ನು ಜಾರಿಗೊಳಿಸುವುದನ್ನೂ ಅಸಾಧ್ಯಗೊಳಿಸಿದೆ. ಈ ರೀತಿಯ ಅಸ್ಪಷ್ಟ ಮತ್ತು ವ್ಯಾಪಕ ವ್ಯಾಖ್ಯಾನವು, ಸಂಸತ್ತು ಹಾಗೂ ರಾಜ್ಯ ವಿಧಾನಮಂಡಳಿಗಳು ರಚಿಸಿರುವ ವಿವಿಧ ಕಾನೂನುಗಳೊಂದಿಗೆ ಹೊಂದಿಕೆಯಾಗದ ಸಂಕೀರ್ಣ ಸಮಸ್ಯೆಗಳನ್ನು ಉಂಟುಮಾಡಿದೆ. ಯಾವುದೇ ಹಕ್ಕುಗಳು, ಸೌಲಭ್ಯಗಳು ಮತ್ತು ರಕ್ಷಣೆಯನ್ನು ನೀಡುವ ಕಾಯ್ದೆಯಲ್ಲಿ, ಆ ಹಕ್ಕುಗಳು, ಸೌಲಭ್ಯಗಳು ಮತ್ತು ರಕ್ಷಣೆಗೆ ಅರ್ಹತೆಯನ್ನು ಹೊಂದುವ ಸ್ಥಿತಿಯನ್ನು ಪಡೆಯುವಂತೆ ಮಾಡುವ ವ್ಯಾಖ್ಯಾನವನ್ನು ಹೊಂದಿರಬಾರದು.

5. ಆದ್ದರಿಂದ, ಕಾಯ್ದೆಯ ಪ್ರಯೋಜನಗಳು ತಲುಪಬೇಕಾದ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳನ್ನು ಸರಿಯಾಗಿ ಮತ್ತು ಸ್ಪಷ್ಟವಾಗಿ ಗುರುತಿಸಲು ನಿಖರವಾದ ವ್ಯಾಖ್ಯಾನ ನೀಡುವುದು ಅತ್ಯಾವಶ್ಯಕವಾಗಿದೆ. ಈ ಕಾಯ್ದೆಯ ಅಡಿಯಲ್ಲಿ ನೀಡಲಾಗುವ ರಕ್ಷಣೆ ಮತ್ತು ಸೌಲಭ್ಯಗಳು ವ್ಯಾಪಕ ಸ್ವರೂಪದಲ್ಲಿರುವುದರಿಂದ, ಈ ರೀತಿಯ ಗುರುತಿಸುವಿಕೆಯನ್ನು ಯಾವುದೇ ಪಡೆಯಬಹುದಾದ ಲಕ್ಷಣಗಳು, ವೈಯಕ್ತಿಕ ಆಯ್ಕೆ ಅಥವಾ ವ್ಯಕ್ತಿಯ ಸ್ವಯಂ–ಗ್ರಹಿಸಿದ ಗುರುತಿನ ಆಧಾರದ ಮೇಲೆ ವಿಸ್ತರಿಸಬಾರದು ಎಂಬುದನ್ನು ಖಚಿತಪಡಿಸಬೇಕು.

6. ಈ ಮಸೂದೆ, ಪ್ರಾಧಿಕಾರವನ್ನು ನೇಮಕ ಮಾಡುವ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಸಂಬಂಧಿತ ಅಧಿಕಾರಿಗಳಿಗೆ ತಜ್ಞರ ಸಲಹೆ ಪಡೆಯುವ ಅವಕಾಶ ನೀಡುವ ವಿಧಾನಗಳನ್ನು ಒಳಗೊಂಡಿದೆ. ಮಸೂದೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಅಧಿಕೃತ ದಾಖಲೆಗಳಲ್ಲಿ ಅನಂತರಿಕ ಬದಲಾವಣೆಗಳನ್ನು ಮಾಡುವ ಅಧಿಕಾರವನ್ನೂ ನೀಡುತ್ತದೆ. ಮಸೂದೆ ಮುಂದುವರೆದು ರಾಷ್ಟ್ರೀಯ ಮಂಡಳಿಯ ರಚನೆಯಲ್ಲಿ ಬದಲಾವಣೆಗಳನ್ನು ಒದಗಿಸುತ್ತದೆ, ಇದರಿಂದ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತದಿಂದ ಪ್ರತಿನಿಧಿಗಳು (ಕನಿಷ್ಠ ನಿರ್ದೇಶಕ ಶ್ರೇಣಿಗಿಂತ ಕಡಿಮೆಯಾಗದ ಶ್ರೇಣಿಯವರು), ಸರದಿಯ ಪ್ರಕಾರ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಈಶಾನ್ಯ ಪ್ರದೇಶಗಳಿಂದ ತಲಾ ಒಬ್ಬರಂತೆ ಸದಸ್ಯರಾಗುವಂತೆ ಖಚಿತಪಡಿಸುತ್ತದೆ.

7. 2019ರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆಯು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವಿರುದ್ಧದ ಭೇದಭಾವ ಮತ್ತು ದೌರ್ಜನ್ಯವನ್ನು ನಿಷೇಧಿಸುತ್ತದೆ, ಆದರೆ ಅದರ ಕಲಂ 18ರಡಿ ಇರುವ ದಂಡಾತ್ಮಕ ವಿಧಾನಗಳು ಪ್ರಸ್ತುತ ಸಾಮಾನ್ಯ ತಪ್ಪುಗಳು ಮತ್ತು ಅಪರಾಧಗಳನ್ನು ಮಾತ್ರ ಒಳಗೊಂಡಿದ್ದು, ಗರಿಷ್ಠ ಎರಡು ವರ್ಷಗಳ ಶಿಕ್ಷೆಯನ್ನು ಮಾತ್ರ ವಿಧಿಸುತ್ತವೆ. ಪ್ರಾಯೋಗಿಕವಾಗಿ ಕಂಡುಬಂದ ಅತ್ಯಂತ ಗಂಭೀರ ಅಪರಾಧಗಳನ್ನು ಇದು ಸಮರ್ಪಕವಾಗಿ ಪರಿಹರಿಸುವುದಿಲ್ಲ. ವಯಸ್ಕರು ಮತ್ತು ಮಕ್ಕಳ ಅಪಹರಣ, ಅಂಗವಿಕಲಗೊಳಿಸುವಿಕೆ,

ಲೈಂಗಿಕ ಅಂಗ ಹಾನಿ, ವೃಷಣ ತೆಗೆಯುವಿಕೆ, ಹಾರ್ಮೋನ್ ಚಿಕಿತ್ಸೆಗಳು ಅಥವಾ ಇತರೆ ಸಮಾನ ಚಿಕಿತ್ಸೆಗಳ ಮೂಲಕ ದೇಹಕ್ಕೆ ಹಾನಿ ಉಂಟುಮಾಡುವುದು ಮತ್ತು ಅವರನ್ನು ಬಲವಂತವಾಗಿ ಟ್ರಾನ್ಸ್‌ಜೆಂಡರ್ ಗುರುತನ್ನು ಸ್ವೀಕರಿಸಲು ಒತ್ತಾಯಿಸುವುದು–ಇವುಗಳನ್ನು ಆರ್ಥಿಕ ಮತ್ತು ಇತರೆ ಶೋಷಣೆಯ (ಭಿಕ್ಷೆ, ಜೀತ ಮುಂತಾದವುಗಳನ್ನು ಒಳಗೊಂಡಂತೆ) ಭಾಗವಾಗಿ ಕಂಡುಬಂದಿವೆ. ಭಾರತೀಯ ನ್ಯಾಯ ಸಂಹಿತೆ, 2023 ಮತ್ತು ಬಾಲಾಪರಾಧ ನ್ಯಾಯ (ಮಕ್ಕಳ ಸಂರಕ್ಷಣೆ ಮತ್ತು ರಕ್ಷಣಾ) ಕಾಯ್ದೆ, 2015ಗಳಲ್ಲಿ ಈ ಅಪರಾಧಗಳ ಕೆಲವು ಅಂಶಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದ್ದರೂ, ಅಪಹರಣ, ಶಾಶ್ವತ ದೈಹಿಕ ಹಾನಿ ಮತ್ತು ಬಲವಂತದ ಗುರುತಿನ ಸಂಯೋಜಿತ ಅಪರಾಧವನ್ನು ಒಟ್ಟಾಗಿ ನೋಡಿಕೊಳ್ಳುವ ಯಾವುದೇ ಪ್ರಸ್ತುತ ನಿಯಮವಿಲ್ಲ.

8. ಆದ್ದರಿಂದ, ಈ ಮಸೂದೆಯ ಮೂಲ ಕಾಯ್ದೆಯ ಕಲಂ 18ನ್ನು ಬದಲಿಸಲು ಪ್ರಸ್ತಾಪಿಸುತ್ತದೆ, ಇದರಲ್ಲಿ ಅಪರಾಧಗಳ ಗಂಭೀರತೆ, ಗಾಯಗಳ ಅನಿರ್ವಚನೀಯತೆ ಮತ್ತು ಮಕ್ಕಳಂತಹ ದುರ್ಬಲ ಬಾಧಿತರ ಸ್ಥಿತಿಯನ್ನು ಪರಿಗಣಿಸಿ ಹಂತವಾರು ಶಿಕ್ಷೆಗಳನ್ನು ಹೊಂದಿದ ವಿಶೇಷ ಅಪರಾಧಗಳನ್ನು ರೂಪಿಸಲಾಗಿದೆ. ಈ ಪ್ರಸ್ತಾಪಿತ ವಿಧಾನಗಳು ಸಾಮಾನ್ಯ ಅಪರಾಧ (ಕ್ರಿಮಿನಲ್) ಕಾನೂನುಗಳೊಂದಿಗೆ ಸಹ ಕಾರ್ಯನಿರ್ವಹಿಸುತ್ತವೆ ಮತ್ತು ಪ್ರತಿಯೊಬ್ಬರ ದೈಹಿಕ ಸಮಗ್ರತೆಯು ಉಲ್ಲಂಘಿಸಲಾಗದಂತದ್ದು, ಹಾಗೂ ಯಾರನ್ನೂ ಬಲವಂತದ ಕಾರ್ಮಿಕ ಕೆಲಸಕ್ಕೆ ಅಥವಾ ಮಾನವ ಸಾಗಣೆಗೆ ಒಳಪಡಿಸಬಾರದು ಎಂಬ ಸಂವಿಧಾನಿಕ ಭರವಸೆಗಳನ್ನು ಶಾಸನಾತ್ಮಕವಾಗಿ ವ್ಯಕ್ತಪಡಿಸುತ್ತವೆ.

9. ಈ ಮಸೂದೆಯು ಮೇಲ್ಕಂಡ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ.